**ದಿ: 28-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ವಾಟೀಸವಾಲು: ಪ್ರತಿವಾದಿ ಪರ ಶ್ರೀ ಹೆಚ್.ಎಲ್.ಸಿ ವಕೀಲರಿಂದ:**

1. ಈ ದಾವಾವನ್ನು ಎರಡು ಹೊಲಗಳು ಅದರ ಸರ್ವೆ ನಂಬರ 18 ಮತ್ತು 76 ಅಂತಾ ಇದ್ದು ಇದರ ಮೇಲೆ ಸಲ್ಲಿಸಿರುತ್ತೇನೆ. ಬೊಮ್ಮನಹಳ್ಳಿ ಸೀಮಾಂತರದಲ್ಲಿರುವ ಸರ್ವೆ ನಂಬರ 18 ವಿಸ್ತೀರ್ಣ 5 ಎಕರೆ 26 ಗುಂಟೆ ಇರುತ್ತದೆ. ಬೊಮ್ಮನಹಳ್ಳಿ ಸೀಮಾಂತರದಲ್ಲಿರುವ ಸರ್ವೆ ನಂಬರ 76 ವಿಸ್ತೀರ್ಣ 4 ಎಕರೆ 26 ಗುಂಟೆ ಇರುತ್ತದೆ. ಸರ್ವೆ ನಂಬರ 18 ಮತ್ತು 76 ರಲ್ಲಿ ಹಂಚಿಕೆ ಆಗಿರುವುದಿಲ್ಲ ಆಗಾಗಿ ಪಟ್ಟಿಗಳಾಗಿರುವುದಿಲ್ಲ. ನನ್ನ ತಂದೆಯ ಹೆಸರು ಬಸವಲಿಂಗಪ್ಪ ಅಂತಾ ಇರುತ್ತದೆ. ಅವರು ತೀರಿಕೊಂಡಿರುತ್ತಾರೆ. ನನ್ನ ತಾಯಿ ಜೀವಂತವಾಗಿದ್ದಾರೆ. ನಾವು 05 ಜನ ಅಣ್ಣ-ತಮ್ಮಂದಿರುರಾಗಿರುತ್ತೇವೆ. ಆ ಐದು ಜನರ ಹೆಸರು ಗೂಳಪ್ಪ, ಮಲ್ಲಪ್ಪ, ಶಿವಪ್ಪ, ಸುಖಮುನಿ ಮತ್ತು ವೆಂಕೋಬ ಎಂದು ಇರುತ್ತವೆ. ನನಗೆ ಶಾಂತಮ್ಮ ಎನ್ನುವವರು ಒಬ್ಬ ಅಕ್ಕ ಇರುತ್ತಾರೆ. ನನ್ನ ತಂದೆಗೆ ಅಯ್ಯಪ್ಪ ಎಂಬುವವರು ಒಬ್ಬ ತಮ್ಮನಿದ್ದರು ಅವರು ತೀರಿಕೊಂಡಿರುತ್ತಾರೆ.

2. ಈ ದಾವಾದಲ್ಲಿ ನಿಮ್ಮ ಅಕ್ಕ ಶಾಂತಮ್ಮ ರವರನ್ನು ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅಣ್ಣ-ತಮ್ಮಂದಿರು ನಮ್ಮ ನಮ್ಮ ಸ್ವಂತ ಮನೆಗಳಲ್ಲಿ ವಾಸಮಾಡಿಕೊಂಡಿರುತ್ತೇವೆ, ಸಾಕ್ಷಿ ಮುಂದುವರೆದು ಮನೆಗಳಲ್ಲಿ ಭಾಗ ಆಗಿರುವುದಿಲ್ಲ ಎಂದು ಹೇಳುತ್ತಾರೆ ಅವರವರೇ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಮನೆಯು ನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ. ಎರಡು ಜಾಗಗಳ ವಿಸ್ತೀರ್ಣ 30 * 40 ಅಂತಾ ಇರುತ್ತದೆ. ಮನೆ ಜಾಗದಲ್ಲಿ ನೀವು ಭಾಗವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈಗ ಸೋಮನಮರಡಿ ಗ್ರಾಮದಲ್ಲಿ ವಾಸ ಮಾಡುತ್ತೇನೆ. ಸೋಮನಮರಡಿಯಲ್ಲಿ 20 ಎಕರೆ ಜಮೀನು ನಮ್ಮ 05 ಜನ ಗಂಡು ಮಕ್ಕಳಿಗೆ ಭಾಗ ಆಗಿರುವುದಿಲ್ಲ ಅದು ನಮ್ಮ ಅಣ್ಣ-ತಮ್ಮಂದಿರ ಹೆಸರಿನಲ್ಲಿ ಇರುತ್ತದೆ. ಬೊಮ್ಮನಹಳ್ಳಿ ಗ್ರಾಮದ ಸರ್ವೆ ನಂಬರ 76 ವಿಸ್ತೀರ್ಣ 4 ಎಕರೆ 26 ಗುಂಟೆ ಜಮೀನನ್ನು ನಾವು ಅಣ್ಣ-ತಮ್ಮಂದಿರು

ಸಾಗುವಳಿ ಮಾಡುತ್ತೇವೆ. ಸರ್ವೆ ನಂಬರ 18 ರಲ್ಲಿ ಬೇರೆಯವರು ಜಮೀನು ಸಾಗುವಳಿಯನ್ನು ಮಾಡುತ್ತಿದ್ದಾರೆ. ಈ ಎರಡು ಹೊಲಗಳು ನನ್ನ ತಂದೆಯ ಹಿರಿಯರ ಆಸ್ತಿ ಆಗಿರುತ್ತದೆ.

3. ನನಗೆ ಮೂವರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತಾರೆ. ಸುಮಾರು 30 ವರ್ಷಗಳ ಹಿಂದೆ ನಿಮ್ಮ ಕುಟುಂಬದಲ್ಲಿ ಭಾಗ ಆಗಿದೆ ಎಂದರೆ ಸರಿಯಲ್ಲ. ದಾವಾ ಜಮೀನುಗಳಲ್ಲಿ ಭಾಗ ಆಗಿ ಪ್ರತ್ಯೇಕ ಪಟ್ಟಿಗಳು ಆಗಿವೆ ಎಂದರೆ ಸರಿಯಲ್ಲ. ಭಾಗದ ಪ್ರಕಾರ ಅವರವರ ಪಟ್ಟಿಗಳಲ್ಲಿ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ನೀವು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದಲ್ಲಿ ಪಿತ್ರಾರ್ಜಿತ ಆಸ್ತಿಗಳಲ್ಲಿ ಇದ್ದಿರಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ದಾವಾ ಜಮೀನುಗಳಲ್ಲಿ ಒಂದು ಜಮೀನು ನೀರಾವರಿಯಾಗಿದೆ ಇನ್ನೊಂದು ಜಮೀನು ಒಣ ಭೂಮಿ ಆಗಿರುತ್ತದೆ. ದಾವಾ ಜಮೀನುಗಳನ್ನು ಮಾರಾಟ ಮಾಡಿದರೆ ಮಾರುಕಟ್ಟೆಯ ಬೆಲೆ 80 ಲಕ್ಷ ರೂಪಾಯಿ ಬರುತ್ತದೆ ಎಂದರೆ ಸರಿಯಲ್ಲ. ನಿಮ್ಮ ಮತ್ತು ಪ್ರತಿವಾದಿಯರ ನಡುವೆ ಭಾಗ ಆಗಿದ್ದರೂ ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿದ್ದಿರಾ ಎಂದರೆ ಸರಿಯಲ್ಲ. ದಾವಾ ಮನೆಗಳಲ್ಲಿ ನಿಮಗೆ ಮತ್ತು ಪ್ರತಿವಾದಿಯರಿಗೆ ಭಾಗ ಆಗಿದೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ